granted that this Government is also developing a parochial attitude towards this area because of border dispute ?

† SRI M. M. J. SADYOJATHA.—A site measuring 200′×200′ R. S. No. 48 is granted to KSRTC on 22-9-1970 by the Asst. Commissioner, Belgaum. The site was handed over on 5-8-1971 but the land is under dispute as the Gayaram Committee had gone on appeal to the Hon'ble High Court of Karnataka. The Hon'ble High Court of Karnataka has remanded the case to the Asst. Charity Commissioner for holding fresh enquiries. The decision is awaited. ಆದಷ್ಟು ಬೇಗ ಡಿಸಿಷನ್ ಬಂದರೆ ಅಲ್ಲಿ-ಬೆಳಗಲ್ಲಿ ಬಸ್‌ಸ್ಟ್ಯಾಂಡ್ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಪೆಚ್. ಎಲ್. ತಿಮ್ಮೇಗೌಡ.—ಸದಸ್ಯರ ಪ್ರಶ್ನೆಗೆ ಸರಿಯಾಗಿ ಸಚಿವರು ಉತ್ತರ ಕೊಡುತ್ತಿಲ್ಲ.

ಅಧ್ಯಕ್ಷರು.—ಕರ್ನಾಟಕ, ಮಹಾರಾಷ್ಟ್ರ ಎಂಬ ಬೇಧಭಾವದ ದೃಷ್ಟಿಯಿಂದ ನಿಲ್ಲಿಸಿದ್ದೀರಾ ಎಂದು ಕೇಳುತ್ತಿದ್ದಾರೆ.

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ಆ ದೃಷ್ಟಿ ಸರ್ಕಾರಕ್ಕಿಲ್ಲ.

SRI N. B. SIRDESAI.— The present Hon'ble Chief Minister, who was the Minister for Transport during the previous Ministry had given an assurance stating that this bus stand would be constructed as early as possible. Whether the Government can now maintain the sanctity and truth of the assurance given by the then Transport Minister, who is the present Chief Minister ?

SRI M. M. J. SADYOJATHA.—Definitely it will maintain the sanctity.

SRI N.B. SIRDESAI.—Sir, may I know since what date this matter of construction of bus stand is pending before the Government ?

SRI M.M.J. SADYOJATHA.—Since 1971 it is pending.

ಅಧ್ಯಕ್ಷರು.—ಮುಂದಿನ ಪ್ರಶ್ನೆ ಐ.ಪಿ.ಡಿ. ಸಾಲಪ್ಪನವರದು. ಅವರು ಬಂದಿಲ್ಲ. ಮಾನ್ಯ ಸದಸ್ಯರಾದ ಶ್ರೀ ಎಂ.ಜಿ. ಜರತಾರ್‌ಘರ್‌ರವರೂ ಬಂದಿಲ್ಲ. ಶ್ರೀ ಬಾಪೂರಾವ್ ದೇಶಪಾಂಡೆಯವರೂ ಬಂದಿಲ್ಲ. ೧೯ನೇ ಪಟ್ಟಿಯಿಂದ ತಡೆಹಿಡಿಯಲಾದ ಪ್ರಶ್ನೆಗಳನ್ನು ತೆಗೆದುಕೊಳ್ಳೋಣ.

ತಡೆಹಿಡಿಯಲಾದ ಪ್ರಶ್ನೆಗಳು (೧೯ನೇ ಪಟ್ಟಿ)

ಪ್ರಶ್ನೆ ಸಂಖ್ಯೆ : ೨೧೧ (೭೩೧)

(ಮಂತ್ರಿಗಳು ಹಾಜರಿರಲಿಲ್ಲ).

Constitution of a Committee for Water Tax

445 SRI M. S. ATMANANDA (Mandya).—Will the Minister of State for Major and Medium Irrigation be pleased to state:—

(*a*) whether it is a fact that assurances were given on the floor of this House that the Committee would be constituted by the Govern-

ment to decide the water rates imposed on sugarcane and paddy crops ;

(*b*) if so, the reasons for not constituting this Committee so far;

(*c*) when the Government will decide to constitute this Committee ?

SRI B. B. CHIMMANAKATTI.—Minister of State for Major and Medium Irrigation.—

(*a*) Yes.

(*b*) This Committee has been constituted under the Chairmanship of Chief Minister *Vide* Government Order No. PWD 2 MLA 80 dated 10-4-1980.

(*c*) Does not arise in view of the reply to (*b*) above.

ಶ್ರೀ ಎಂ. ಎಸ್. ಆತ್ಮಾನಂದ.—ಸರಕಾರವು ಕಬ್ಬು ಹಾಗೂ ಭತ್ತದ ಬೆಳೆಗಳಿಗೆ ವಿಧಿಸಿರುವ ನೀರಿನ ದರವನ್ನು ನಿರ್ಧರಿಸಲು ೧೦ನೇ ವಿಧ್ರುಲ್ ೧೯೮೦ರಂದು ಸಮಿತಿ ರಚಿಸಿದೆಯೆಂದು ಉತ್ತರದಲ್ಲಿ ಹೇಳಿದ್ದಾರೆ ಈ ಸಮಿತಿ ನೀರಿನ ದರದ ಬಗ್ಗೆ ಚರ್ಚೆ ಮಾಡಲು ಎಷ್ಟು ಬಾರಿ ಸೇರಿತು? ಸರ್ಕಾರ ಯಾವ ಅಜ್ಞೆಯನ್ನು ಹೊರಡಿಸಿದೆ? ನೀರಿನ ದರವನ್ನು ಯಾವ ಆಧಾರದಮೇಲೆ ಫಿಕ್ಸ್ ಮಾಡಿದ್ದೀರಿ ಎಂದು ಕೇಳುತ್ತೇನೆ.

† ಶ್ರೀ ಆರ್. ಗುಂಡೂರಾವ್ (ಮುಖ್ಯಮಂತ್ರಿಗಳು).—ಕಮಿಟಿ ಮಾಡಿದ್ದೇನೋ ನಿಜ. ಆದರೆ ಸೇರುವ ಅವಶ್ಯಕತೆ ಕಂಡುಬರಲಿಲ್ಲ. ಅನೇಕರಿಂದ ರೆಪ್ರಸೆಂಟೇಷನ್ ಬಂದಿತ್ತು, ಮತ್ತು ಅನೇಕರು ಅನೇಕ ಅಭಿಪ್ರಾಯಗಳನ್ನು ಕೊಟ್ಟರು. ಇದನ್ನೆಲ್ಲಾ ಪರಿಶೀಲನೆ ಮಾಡಿ ರೇಟನ್ನು ಫಿಕ್ಸ್ ಮಾಡುವುದು ಸೂಕ್ತವೆಂದು ಕಂಡುಬಂದಿದ್ದರಿಂದ ಆ ಪ್ರಕಾರ ರೇಟ್ ಫಿಕ್ಸ್ ಮಾಡಿದೆ. ಕಮಿಟಿ ಸೇರಿಲ್ಲ.

ಶ್ರೀ ಹೆಚ್. ಡಿ. ಚೌಡಯ್ಯ.—ಮಾನ್ಯ ಮುಖ್ಯಮಂತ್ರಿಗಳು ಕಮಿಟಿ ಮೀಟಿಂಗ್ ಮಾಡುವ ಅವಶ್ಯಕತೆ ಕಂಡಂಬರಲಿಲ್ಲ ಎಂದು ಹೇಳಿದರು. ಮಾನ್ಯ ಮುಖ್ಯಮಂತ್ರಿಗಳಿಗೆ ಒಂದು ವಿಷಯವನ್ನು ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಇದೇ ಮಾರ್ಚ್ ತಿಂಗಳಲ್ಲಿ ಕಳೆದವರ್ಷ ಗಮನ ಸೆಳೆಯುವ ಸೂಚನೆಯನ್ನು ಕಳುಹಿಸಿದ್ದರ ಮೇರೆಗೆ ಮಾನ್ಯ ಮುಖ್ಯಮಂತ್ರಿಗಳು ಎರಡೂ ಸದನಗಳ ಸದಸ್ಯರಿಂದ ಕೂಡಿದ ಜಂಟೀ ಸಮಿತಿಯನ್ನು ರಚಿಸಿ ಅದರಿಂದ ಕೂಲಂಕುಷವಾಗಿ ಪರಿಶೀಲನೆ ಮಾಡಿಸಿ ತೀರ್ಮಾನ ಕೈಗೊಳ್ಳೋಣ ಎಂಬ ಭರವಸೆಯನ್ನು ಕೊಟ್ಟಿದ್ದರು. ೧೦-೪-೮೦ರಲ್ಲಿ ಕಮಿಟಿ ರಚನೆಯಾಗಿ ಇದುವರೆಗೂ ಮೀಟಿಂಗ್ ಕರೆದಿಲ್ಲ ಮಾನ್ಯ ಮುಖ್ಯಮಂತ್ರಿಗಳು ಅದರ ಅವಶ್ಯಕತೆ ಇಲ್ಲ ಎಂದು ಹೇಳುತ್ತಿದ್ದಾರೆ. ಮಾನ್ಯ ಅಧ್ಯಕ್ಷರು ಇದನ್ನು ಪರಿಶೀಲಿಸಬೇಕು. ಏಕೆಂದರೆ ಈ ಸದನದ ತೀರ್ಮಾನದ ಪ್ರಕಾರ ಆದಾಗಿರುವುದರಿಂದ ಹಕ್ಕಿನ ಚ್ಯುತಿಯಾಗುತ್ತದೆ.

ಅಧ್ಯಕ್ಷರು.—ಕಾನ್ಸಿಟ್ಯೂಟ್ ಮಾಡಿದ್ದರು. ಈಗ ಅದರ ಅವಶ್ಯಕತೆ ಇಲ್ಲ ಎಂದು ಹೇಳಿದ್ದಾರೆ. ತಾವು ಪ್ರಶ್ನೆ ಕೇಳಿ.

ಶ್ರೀ ಹೆಚ್. ಡಿ. ಚೌಡಯ್ಯ.—ಇದು ಹಕ್ಕುಚ್ಯುತಿಯಾಗುತ್ತದೆ. ಸದನದ ತೀರ್ಮಾನವನ್ನು ಕಡೆಗಣಿಸಿರುವುದು ತಪ್ಪಾಗುತ್ತದೆ. ಈಗಾಗಲೇ ಎರಡು ಬಾರಿ ಸರ್ಕಾರ ನೀರಿನ ದರವನ್ನು ಪುನರ್ ವಿಮರ್ಶೆ ಮಾಡಿದೆ. ಕಳೆದ ಜನವರಿ ೨೪ನೇ ತಾರೀಖು ಮಂಡ್ಯದಲ್ಲಿ ಭಾರಿ ಸಭೆಯಲ್ಲಿ ಪ್ರಸ್ತಾಪ ಮಾಡಿದಾಗ ಮಾನ್ಯ ಮುಖ್ಯಮಂತ್ರಿಗಳು ಆರೀತಿ ಹೇಳಿಕೆ ಕೊಟ್ಟಿದ್ದರೆ ಪುನಃ ಪರಿಶೀಲನೆ ಮಾಡೋಣ ಎಂದು ಹೇಳಿದರು. ಇದು ಒಂದು ಪ್ರದೇಶದ ಪ್ರಶ್ನೆಯಲ್ಲ ಇಡೀ ರಾಜ್ಯದ ಪ್ರಶ್ನೆ. ಅನೇಕ ಸಂಘಸಂಸ್ಥೆಗಳು ರೈತರ ವೇದಿಕೆಗಳು ಸರ್ಕಾರದ ಮುಂದೆ ಅಭಿಪ್ರಾಯಗಳನ್ನು ಕೊಟ್ಟಿದ್ದು ಆ ಪ್ರಕಾರ ನೀರಿನ ತೆರಿಗೆಯನ್ನು ವಿಧಿಸುತ್ತಿದ್ದೇವೆ ಎಂದು ಮಾನ್ಯ ಮುಖ್ಯಮಂತ್ರಿಗಳೇ ತಿಳಿಸಿದ್ದಾರೆ. ನೀರಿನ ದರವನ್ನು ಮನ್ನಾ ಮಾಡಿದರೆ ರೈತರಿಗೆ ಬಹಳ ಅನುಕೂಲವಾಗುತ್ತದೆ,

ಶ್ರೀ ಆರ್. ಗುಂಡೂರಾವ್.—ಮಾನ್ಯ ಸದಸ್ಯರಿಗೆ ಬೇಕಾಗಿರುವುದು ಕೆಲಸ ಆಗುವುದು. ಒಂದು ತೀರ್ಮಾನಕ್ಕೆ ಬಂದು ೨೮ನೇ ತಾರೀಖು ಒಂದು ಆಜ್ಞೆ ಹೊರಡಿಸಿದ್ದೇವೆ. ಅದೂ ತೃಪ್ತಿಯಾಗಿಲ್ಲ ಎಂದರೆ ಯೋಚನೆ ಮಾಡೋಣ. ಇದನ್ನೆಲ್ಲಾ ವಿಚಾರ ಮಾಡಿ ಆಜ್ಞೆ ಹೊರಡಿಸಿದ್ದೇವೆ. ಇದರಲ್ಲಿ ಏನಾದರೂ ಹೆಚ್ಚುಕಡಿಮೆ ಇದ್ದರೆ, ಅದು ಕಂಡುಬಂದರೆ ಪರಿಶೀಲನೆ ಮಾಡೋಣ. ಇದೇ ಸರಿ ಎಂದು ನಾನಂವಾದ ಮಾಡುತ್ತಿಲ್ಲ. ನನ್ನ ನಿಲವು ಏನು ಎಂಬುದು ತಮಗೆ ಗೊತ್ತಿದೆ.

ಶ್ರೀ ಹೆಚ್.ಡಿ. ಚೌಡಯ್ಯ.—ತಮ್ಮ ನಿಲುವನ್ನು ನಾನು ಸ್ವಾಗತಿಸುತ್ತೇನೆ. ಆದರೆ ಈಗಾಗಲೇ ರೆಕವರಿ ಪ್ರಾರಂಭವಾಗಿದೆ. ಡಿಮ್ಯಾಂಡ್ ಬುಕ್ ಮಾಡುತ್ತಿದ್ದಾರೆ. ಆದ್ದರಿಂದ ಈಗ ರೆಕವರಿ ತಡೆ ಹಿಡಿಯಿರಿ. ಇನ್ನು ೧೫ ದಿನ ಅಥವಾ ೧ ತಿಂಗಳಲ್ಲಿ ವಿಮರ್ಶೆ ಮಾಡಿ ನಂತರ ಎಫೆಕ್ಟಿಗೆ ಕೊಡಿ.

ಶ್ರೀ ಆರ್. ಗುಂಡೂರಾವ್.—ಆಗಬಹುದು. ಆಲ್ಲಿಯವರೆಗೆ ನಿಲ್ಲಿಸಬಹುದು.

ಶ್ರೀ ಕೆ ಹೆಚ್. ಶ್ರೀನಿವಾಸ್.—ಪುನರ್‌ವಿಮರ್ಶಿತ ದರ ಜಾರಿಗೆ ಕೊಟ್ಟಿದ್ದೀರಿ. ಬೇರೆ ಬೇರೆ ವಿರಿಯಾಕ್ಕೆ ಸಂಬಂಧಪಟ್ಟಹಾಗೆ ಸಮಸ್ಯೆಗಳನ್ನು ಪರಿಶೀಲನೆ ಮಾಡುವುದಕ್ಕೆ ಒಪ್ಪಿಕೊಂಡಿದ್ದೀರಿ. ಸಂತೋಷ ಮುನಿನಾಡು ಭಾಗದಲ್ಲಿ ೧೯೬೫ನೇ ಇಸವಿಯಿಂದ ಅದರಲ್ಲೂ ಸಣ್ಣ ಕೆರೆಗಳ ಕೆಳಗೆ ಇರತಕ್ಕ ಅಚ್ಚುಕಟ್ಟು ದಾರರಿಗೆ ನೀರಿನ ದರ ಹಾಕಬಾರದು, ಹಿಂದೆ ಇದ್ದಂತೆ ಕನ್‌ಸಾಲಿಡೇಟಾಗಿ ಹಾಕಬೇಕು ಎಂಬ ಬೇಡಿಕೆಇದೆ. ಅದೇ ರೀತಿ ಮಾಡುವುದಕ್ಕೆ ಒಪ್ಪಿಗೆ ಕೂಡ ಹಿಂದೆ ಆಗಿದೆ. ಅದನ್ನು ಪುನರ್ ಪರಿಶೀಲನೆ ಮಾಡುವುದಕ್ಕೆ ಒಪ್ಪಿಗೆಕೊಡುವುದರ ಜೊತೆಗೆ ಮುಂದೆ ಕರೆಯುವ ಸಭೆಗೆ ಮಲೆನಾಡುಶಾಸಕರನ್ನೂಕರೆದರೆ ವಿಷಯವನ್ನು ವಿವರಿಸುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಆರ್. ಗುಂಡೂರಾವ್.—ಆಗಬಹುದು.

ಶ್ರೀ ಎಸ್.ಆರ್. ಬೊಮ್ಮಾಯಿ.—ಮಾನ್ಯ ಮುಖ್ಯಮಂತ್ರಿಗಳು ವಸೂಲು ಮಾಡುವುದನ್ನು ತಡೆ ಹಿಡಿಯತಕ್ಕ ಭರವಸೆ ಕೊಟ್ಟಿದ್ದಾರೆ. ಅದನ್ನು ಸ್ವಾಗತ ಮಾಡುತ್ತೇನೆ. ಈ ಬಗ್ಗೆ ನಮ್ಮ ಕಮಿಟಿ ವರದಿಯಲ್ಲೂ ಹೇಳಿದ್ದೇವೆ. ೧೯೬೫ರಿಂದ ಕೆರೆಗಳ ಬಗ್ಗೆ ಹೇಳುತ್ತಿದ್ದಾರೆ. ಈ ಬಗ್ಗೆ ಹಿಂದೆ ಚಳುವಳಿ ಆದಾಗ ವಿರೇಂದ್ರಪಾಟೀಲರ ಕಾಲದಲ್ಲಿ ಕೊಟ್ಟಂಥ ಸ್ವಾಮಿನಾಥನ್ ಅವರ ವರದಿ ಇದೆ. ಅವರು ರೆವಿನ್ಯೂ ಕಮಿಷನರ್ ಆಗಿದ್ದರು. ಅವರು ಪಾಟರ್ ರೇಟನ್ನು ತೆಗೆದು ಕನ್‌ಸಾಲಿಡೇಟಾಗಿ ಹಾಕಿದ್ದರು.

ಆಪೇ ರೀತಿ ಶ್ರೀಮಾನ್ ಆನಂದಕೃಷ್ಣನ್ ಅವರ ಜೊತೆ ಕೂಡ ಚರ್ಚೆ ಮಾಡಿ ಅವರೂ ಸರ್ಕಾರಕ್ಕೆ ವರದಿ ಕೊಟ್ಟಿದ್ದಾರೆ. ಅದನ್ನು ಪರಿಶೀಲನೆ ಮಾಡಿ ಚರ್ಚೆ ಮಾಡಿದಾಗ ಸರ್ಕಾರದವರು ಒಪ್ಪಿಕೊಂಡಿದ್ದರು. ಕೆರೆಗಳಿಗೂ ಬೇರೆಯದಕ್ಕೂ ಅಂತರ ಇದೆ. ಆದ್ದರಿಂದ ಇದಕ್ಕೆ ಬೇರೆ ತರಹ ಮಾಡಬೇಕು ಎಂಬ ತತ್ವವನ್ನು ಸರ್ಕಾರದವರು ಒಪ್ಪಿಕೊಂಡಿದ್ದಾರೆ. ಸರ್ಕಾರದಲ್ಲಿ ಎಲ್ಲಾ ರೆಕಾರ್ಡ್ಸ್ ಇದೆ. ರೆಕಾರ್ಡ್ಸ್ ನೋಡಿಕೊಂಡು ಸರ್ಕಾರದವರು ನಿರ್ಣಯ ತೆಗೆದುಕೊಳ್ಳಲಿ. ರೆಕಾರ್ಡ್ಸ್‌ಗಳನ್ನು ನೋಡಿ ಶಾಸಕರನ್ನು ಕರೆದು ಚರ್ಚೆಮಾಡಿ ಎಲ್ಲಾ ಪರಿಶೀಲನೆ ಮಾಡಿ. ತಡೆಯಾಜ್ಞೆ ಇವತ್ತೇ ಜಾರಿಗೆ ಬರುವಂತೆ ಮಾಡಬೇಕು. ಏಕೆಂದರೆ ಈ ಮನೆಯಲ್ಲಿ ಆಶ್ವಾಸನೆ ಕೊಟ್ಟಮೇಲೆ ಒಂದು ತಿಂಗಳವರೆಗೆ ಆಜ್ಞೆಗಳು ಜಾರಿಗೆ ಬರುವುದಿಲ್ಲ.

ಶ್ರೀ ಆರ್. ಗುಂಡೂರಾವ್.—ಈ ಮನೆಯಲ್ಲಿ ಆಶ್ವಾಸನೆ ಕೊಟ್ಟಮೇಲೆ ಆದು ಆಜ್ಞೆಯೇ.

ಶ್ರೀ ಎಸ್.ಆರ್. ಬೊಮ್ಮಾಯಿ.—ಖುಷ್ಕಿ ಜಮೀನಿನ ಮೇಲಿನ ಕೃಷಿ ವರಮಾನ ತೆರಿಗೆಯನ್ನು ರದ್ದು ಮಾಡಲಾಗಿದೆ ಇದರ ಬಗ್ಗೆ telegraph telex message ಕೊಡಲಾಗಿದೆ. ನಾನಂ ಊರಿನಲ್ಲಿ ಸಿಕ್ಕಲಿಲ್ಲವೆಂದು, ಕೃಷಿ ಅಧಿಕಾರಿಯು ನನ್ನ ಶಾಸಕರ ಭವನದ ವಿಳಾಸಕ್ಕೆ ನೋಟಿಸನ್ನು ಕಳುಹಿಸಿದ್ದಾರೆ. ಸರ್ಕಾರದ ಆಜ್ಞೆ ಇದೆ. ಆರ್ಡಿನೆನ್ಸ್ ಇದೆ. ನಾವು Charter of Demands ಮುಂಡಿಸಿದ ಸಂದರ್ಭದಲ್ಲಿ ಖುಷ್ಕಿ ಜಮೀನಿನ ಮೇಲಿನ ಕೃಷಿ ವರಮಾನ ತೆರಿಗೆಯನ್ನು ರದ್ದು ಮಾಡಲಾಗುವುದೆಂದು ತಾವು ಹೇಳಿಕೆ ಕೊಟ್ಟಿದ್ದಿರಿ, ಮತ್ತು ಆಮೇಲೆ ಸರ್ಕಾರದ telex messege ಕೂಡ ಹೋಗಿದೆ, ಈ ಬಗ್ಗೆ ಆರ್ಡಿನೆನ್ಸ್ ಆಗಿದ್ದರೂ, ನನಗೆ ನೋಟಿಸ್ ಬರುತ್ತಿದೆ.

ಶ್ರೀ ಆರ್. ಗುಂಡೂರಾವ್.—ನೋಟಿಸ್ ಯಾವ ತಾರೀಖಿಗೆ ಬುದಿದೆ?

ಶ್ರೀ ಎಸ್.ಆರ್. ಬೊಮ್ಮಾಯಿ.—ಮೂರು ದಿವಸಗಳ ಹಿಂದೆ ಬಂತು. ನನ್ನಂತಹವನಿಗೇ ನೋಟಿಸ್ ಬಂದರೆ, ಇನ್ನು ರೈತರನ್ನು.....

ಶ್ರೀ ಎಂ.ಸಿ. ಬಸಪ್ಪ,—ನಿಮ್ಮಲ್ಲಿ well irrigation ಇಲ್ಲವೆನ್ನುವುದಕ್ಕೆ ಪುರಾವೆ ಏನು?

ಶ್ರೀ ಎಸ್.ಆರ್. ಬೊಮ್ಮಾಯಿ.—ನನ್ನಲ್ಲಿ well irrigation ಇಲ್ಲ. ಅದಕ್ಕೆ ದಾಖಲೆಗಳಿವೆ. ಅಲ್ಲದೆ, ನಾನು ಇಲ್ಲವೆಂದು ಹೇಳಿದರೆ ಸಾಕು. ಕುಂದಗೋಳದಲ್ಲಿ ನನಗೆ ಯಾವ ರೀತಿ ಇದೆ ಎಂದು ಎಲ್ಲರಿಗೂ ಗೊತ್ತು .ಬೇರೆ ರೈತರಿಗೂ ಈ ನೋಟಿಸನ್ನು ಕೊಡುತ್ತಿರುವುದರಿಂದ ಅವರ harassment ಆಗುತ್ತಿದೆ. ಸರ್ಕಾರದ ಆಜ್ಞೆ ಇದ್ದರೂ ಹೀಗೇ ಆಗುತ್ತಿದೆ? ತೆರಿಗೆ ವಸೂಲ್ಮಾಡಬಾರದೆಂದು ಸರ್ಕಾರ ಸೂಕ್ತ ಆದೇಶ ಕಳುಹಿಸಬೇಕು. ಈ ಮಸೂದೆಯನ್ನು ಜಂಟಿ ಆಯ್ಕೆ ಸಮಿತಿಗೆ ಕಳುಹಿಸಬೇಕೆಂದು ತೀರ್ಮಾನ ಮಾಡಲಾಗಿದೆ. ಆದುದರಿಂದ, ಖುಷ್ಕಿ ಜಮೀನಿನ ಮೇಲೆ ಕೃಷಿ ವರಮಾನ ತೆರಿಗೆಯನ್ನು ವಸೂಲ್ಮಾಡಬಾರದೆಂದು ಕೂಡಲೇ ಸೂಕ್ತ ನಿರ್ದೇಶನ ಕಳುಹಿಸಬೇಕು.

SRI B. SUBBAIAH SETTY.—I wanted to tell about two things One is regarding stay and another one is reconsideration of collection of tax.

ಶ್ರೀ ಆತ್ಮಾನಂದ.—ತೆರಿಗೆ ವಸೂಲಾತಿ ರದ್ದತಿಯನ್ನು ಏಪ್ರಿಲ್ ಒಂದನೇ ತಾರೀಖಿನಿಂದಲೇ ಜಾರಿಗೊಳಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಆರ್. ಗುಂಡೂರಾವ್,—ಮಾಡುತ್ತೇನೆ.

Encroachment of Bethamangala Tank-bund Area.

152 SRI C. M. ARUMUGHAM (K. G. F.).—Will the Minister for Transport and Minor Irrigation be pleased to state.—

(*a*) the extent of Bethamangala tank ;

(*b*) whether there are any encroachments in the tank-bund area;

(*c*) names of persons who are already having lands in the tank-bund area and who have encroached lands ;

(*d*) whether Government would take immediate action consider evicting the encroachers from the Bethamangala tank-bund area?

SRI M. M. J. SADYOJATHA,—(Minister for Transport and Minor Irrigation).—

(*a*) 862.55 acres at F.T.L. of 2554 R.L.

(*b*) Yes.

(*c*) List of persons who have encroached land is enclosed.

(*d*) Action is being taken by Revenue authorities by issuing notices.

SRI C. M. ARUMUGHAM.—Sir, may I know from the Government what was the waterspread area ; when this project was constructed and what is the waterspread area to-day.